KARN010001302024

Presented on : 23-01-2024
Registered on : 23-01-2024
Decided on : 22-07-2026
Duration: 02 years 06 months 00 days

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

:ಉಪಸ್ಥಿತರು:

M H ANNAYYANAVAR
Digitally signed by M H ANNAYYANAVAR
Date: 2026.07.22 17:13:15 +0530

ಶ್ರೀಯುತ ಎಂ.ಹೆಚ್.ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕ **22** ನೇ ಜುಲೈ ಮಾಹೆ **2026**

ಕ್ರಿಮಿನಲ್ ಅಪೀಲು ಸಂಖ್ಯೆ**: 5/2024**

ಮೇಲ್ಮನವಿದಾರರು: (ಆರೋಪಿ)
ಶ್ರೀ ದೇವರಾಜು,
ಬಿನ್ ಹನುಮಯ್ಯ,
ವಯಸ್ಸು 38 ವರ್ಷ.
ವಾಸಃ ತೀಥ, ಕೊಳ್ಳಲಾ ಹೋಬಳಿ,
ಕೊರಟಗೆರೆ ತಾಲ್ಲೂಕು, ತುಮಕೂರು.
(ಪರವಾಗಿ ಶ್ರೀ ಆರ್.ಎಸ್., ವಕೀಲರು)

:: ವಿರುದ್ಧ::

ಎದುರುದಾರರು :
ರಾಜ್ಯದ ಪರವಾಗಿ
ಕುದೂರು ಪೊಲೀಸ್ ಠಾಣೆ.
(ಸರ್ಕಾರಿ ಅಭಿಯೋಜಕರು ಪ್ರತಿನಿಧಿಸಿರುತ್ತಾರೆ.)

******

# ತೀರ್ಪು

ಮೇಲ್ಮನವಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ.374(3)(ಎ)ರ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿ, ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಮಾಗಡಿ ಇವರು ಸಿ.ಸಿ.ನಂ.71/2015 ದಿನಾಂಕ 02.01.2024 ರಂದು ನೀಡಿದಂತಹ ತೀರ್ಪನ್ನು ರದ್ದುಪಡಿಸಿ ಮೇಲ್ಮನವಿದಾರರು/ಆರೋಪಿಯನ್ನು ನಿರ್ದೋಷಿ ಅಂತಾ ಪರಿಗಣಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ ಆರೋಪಿಯಾಗಿದ್ದು, ಎದುರುದಾರರು ಪಿರ್ಯಾದಿಯಾಗಿರುತ್ತಾರೆ.

3. <u>ಕೇಸಿನ ಸಂಕ್ಷಿಪ್ತ ಸಾರಾಂಶ:-</u> ದಿನಾಂಕ 06.10.2014 ರಂದು ಸುಮಾರು 2.00 ಗಂಟೆ ಸಮಯದಲ್ಲಿ ಎನ್.ಹೆಚ್.48 ರಸ್ತೆ, ತಿಗಳರಪಾಳ್ಯ ಬಳಿ ಆರೋಪಿ ಖಾಸಗಿ ಬಸ್ ನಂ.ಕೆಎ-11-ಎ-8999 ನ್ನು ನೆಲಮಂಗಲ ಕಡೆಯಿಂದ ಕುಣಿಗಲ್ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ತನ್ನ ಮುಂದೆ ಹೋಗುತ್ತಿದ್ದ ಟ್ರಾಕ್ಟರ್ ಮತ್ತು ಟ್ರೈಲರ್ ನಂ.ಕೆಎ-52-ಟಿ-1095-1096 ರ ಹಿಂದಿನ ಟ್ರೈಲರ್‌ಗೆ ಡಿಕ್ಕಿ ಹೊಡೆಸಿದ್ದರಿಂದ ಟ್ರಾಕ್ಟರ್ ಪಲ್ಟಿಯಾಗಿ ಎರಡೂ ವಾಹನಗಳು ಜಖಂಗೊಂಡು ಟ್ರೈಲರನಲ್ಲಿದ್ದ ಮಂಜುನಾಥ ಇವರ ತಲೆ, ಎದೆ ಮತ್ತು ಇತರೆ ಕಡೆ ತೀವ್ರವಾಗಿ ಏಟಾಗಿದ್ದು, ಅವರನ್ನು ನೆಲಮಂಗಲದ ಎಂ.ಎಸ್.ರಾಮಯ್ಯ, ಹರ್ಷ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ಬೆಂಗಳೂರಿನ ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ತದನಂತರ ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಗುಣವಾಗದೇ ದಿನಾಂಕ

19.10.2014 ರಂದು ಮಧ್ಯಾಹ್ನ 1.00 ಗಂಟೆಯಲ್ಲಿ ಮೃತಪಟ್ಟಿರುತ್ತಾರೆ ಹಾಗೂ ಚಾಸಾ.1 ಮತ್ತು 3 ರವರಿಗೆ ಬಾರಿ ಹಾಗೂ ಸಾಧಾರಣಾ ಗಾಯಗಳಾಗಿರುತ್ತವೆ. ಸದರಿ ಘಟನೆಗೆ ಸಂಬಂಧಪಟ್ಟಂತೆ ಚಾಸಾ.1 ರವರು ಕೊಟ್ಟ ದೂರಿನ ಪ್ರಕಾರ ಕೇಸು ನೋಂದಣಿ ಮಾಡಿಕೊಂಡು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು 304(ಎ)ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

4. ನಂತರ ವಿಚಾರಣಾ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ, ಸಂಜ್ಞೆ ಪಡೆದುಕೊಂಡು ಕೇಸು ನೋಂದಣಿ ಮಾಡಿಕೊಂಡು ಆರೋಪಿಗೆ ನ್ಯಾಯಾಲಯದಿಂದ ಸಮನ್ಸ್ ಕಳುಹಿಸಲಾಗಿ, ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ.

5. ನಂತರ ವಿಚಾರಣಾ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಆರೋಪಣೆ ರಚನೆ ಮಾಡಲು ಸಾಕಷ್ಟು ಕಾರಣಗಳು ಇದ್ದು, ಆರೋಪಣೆ ರಚನೆ ಮಾಡಿ ಆರೋಪಿಗೆ ಓದಿ ಹೇಳಲಾಗಿ ಆರೋಪಿಯು ತಾನು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು ಅಂತಾ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

6. ನಂತರ ವಿಚಾರಣಾ ನ್ಯಾಯಾಲಯವು ಆರೋಪಿಯ ಮೇಲಿರುವ ಆಪಾದನೆ ರುಜುವಾತುಪಡಿಸಲು ಅಭಿಯೋಜಕ ಪಕ್ಷವು ತಮ್ಮ ಪರವಾಗಿ ಪ್ರಾಸಾ.1 ರಿಂದ ಪ್ರಾಸಾ.9

ಸಾಕ್ಷಿಗಳನ್ನು ವಿಚಾರಣೆ ಮಾಡಿ ನಿಶಾನೆ ಪಿ.1 ರಿಂದ ಪಿ.8 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

7. ಅಭಿಯೋಜಕ ಸಾಕ್ಷಿ ಮುಗಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ಅಡಿಯಲ್ಲಿ ಹೇಳಿಕೆಯನ್ನು ದಾಖಲು ಮಾಡಿಕೊಂಡು ಓದಿ ಹೇಳಲಾಗಿ ಸದರಿ ವಿಷಯಗಳನ್ನು ಆರೋಪಿಯು ತಿಳಿದುಕೊಂಡು ಎಲ್ಲಾ ಅಂಶಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ಇಲ್ಲ ದಾಖಲೆಗಳನ್ನು ಗುರುತಿಸುವುದು ಯಾವುದು ಇರುವುದಿಲ್ಲ ಅಂತಾ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

8. ಉಭಯ ವಕೀಲರ ವಾದವನ್ನು ಕೇಳಲಾಗಿ, ವಿಚಾರಣಾ ನ್ಯಾಯಾಲಯವು ಅಭಿಯೋಜಕ ಪಕ್ಷ ಒದಗಿಸಿದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಈ ಕೆಳಕಂಡಂತ ಅಂಶಗಳನ್ನು ರಚನೆ ಮಾಡಿರುತ್ತಾರೆಃ

1. Whether the prosecution proves beyond all reasonable doubt that on 06.10.2014 at about 2.00 pm., with in the jurisdiction of Kudur Police Station the accused being the driver of private bus bearing its registration No.KA-11-A-8999 drove the bus on NH-75, Thigalarapalya at a high speed in rash and negligent manner, so as to endanger human life and personal safety of others and thereby the accused has committed an offence punishable U/sec.279of IPC ?

2. Whether the prosecution proves beyond all reasonable doubt that on the above

said date, time and place, the accused being the driver of private bus bearing its registration No.KA-11-A-8999 drove the bus on NH-75, Thigalarapalya at a high speed in a rash and negligent manner, so as to endanger human life and personal safety of others and dashed the tractor and trailer bearing it registration No.KA-52-T-1095-1096 from the backside resulting the tractor and trailer overturned and CW1 and CW3 are sustained with simple and grievous injuries and thereby accused has committed an offence punishable U/sec.337 and 338 of IPC?

3. Whether the prosecution proves beyond all reasonable doubt that the accused being the driver of private bus bearing its registration No.KA-11-A-8999 drove the bus on NH-75, Thigalarapalya at a high speed in a rash and negligent manner, so as to endanger human life and personal safety of others and dashed the tractor and trailer bearing it registration No.KA-52-T-1095-1096 from the backside resulting the tractor and trailer overturned and deceased Manjunath sustained with grievous on his head and all over the body and deceased Manjunath was admitted to Nelamangala M.S.Ramaiah Hospital and later for further treatment he was admitted to Bengaluru Colombia Hospital and shifted to Nelamangala Hospital in failure of treatment deceased Manjunath was died on 19.10.2014 at 1.00 pm., and thereby

accused has committed an offence punishable U/sec.304(A) of IPC?

4. What order?

9. ನಂತರ ವಿಚಾರಣಾ ನ್ಯಾಯಾಲಯವು ಆರೋಪಿಯ ವಿರುದ್ಧ ತೀರ್ಪು ನೀಡಿ ಈ ಮೇಲಿನ ಅಂಶ ಸಂಖ್ಯೆ 1 ರಿಂದ 3 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿ, ಆರೋಪಿಯ ಮೇಲೆ ಆರೋಪ ಸಾಭೀತಾಗಿದ್ದರಿಂದ, ಆರೋಪಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ.255(2) ರಡಿಯಲ್ಲಿ ಶಿಕ್ಷೆ ವಿಧಿಸಿ ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ.279 ರ ಅಡಿಯಲ್ಲಿ 2 ತಿಂಗಳ ಸಜೆ ಮತ್ತು ರೂ.1,000/-ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ ಪುನಃ 10 ದಿನಗಳು ಸಾಧಾರಣಾ ಸಜೆ ಅನುಭವಿಸತಕ್ಕದ್ದು. ಭಾರತೀಯ ದಂಡ ಸಂಹಿತೆ ಕಲಂ.337 ಅಡಿಯಲ್ಲಿ 2 ತಿಂಗಳು ಸಾಧಾರಣಾ ಸಜೆ ಮತ್ತು ರೂ.500/- ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ ಪುನಃ 10 ದಿನಗಳು ಸಾಧಾರಣಾ ಸಜೆ ಅನುಭವಿಸತಕ್ಕದ್ದು. ಭಾರತೀಯ ದಂಡ ಸಂಹಿತೆ ಕಲಂ.338 ರ ಅಡಿಯಲ್ಲಿ 2 ತಿಂಗಳು ಸಾಧಾರಣಾ ಸಜೆ ಮತ್ತು ರೂ.1,000/- ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ ಪುನಃ 10 ದಿನಗಳು ಸಾಧಾರಣಾ ಸಜೆ ಅನುಭವಿಸತಕ್ಕದ್ದು. ಭಾರತೀಯ ದಂಡ ಸಂಹಿತೆ ಕಲಂ.304(A)ರ ಅಡಿಯಲ್ಲಿ 6 ತಿಂಗಳು ಸಾಧಾರಣಾ ಸಜೆ ಮತ್ತು ರೂ.10,000 ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 30 ದಿವಸ ಸಾದಾ ಸಜೆ ಅನುಭವಿಸತಕ್ಕದ್ದು. ಈ ಮೇಲ್ಕಂಡ ಶಿಕ್ಷೆಗಳು ಏಕಕಾಲಕ್ಕೆ ಜಾರಿಗೆ ಬರತಕ್ಕದ್ದು ಅಂತಾ ತೀರ್ಪು ನೀಡಿರುತ್ತಾರೆ.

10. ನಂತರ ಸದರಿ ತೀರ್ಪಿನ ವಿರುದ್ಧ ಆರೋಪಿ - ಮೇಲ್ಮನವಿದಾರರಾಗಿ ಮತ್ತು ಸರ್ಕಾರವನ್ನು ಎದುರುದಾರರನ್ನಾಗಿ ದಂಡ ಪ್ರಕ್ರಿಯಾ ಸಂಹಿತೆ ಕಲಂ.374 ರಡಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

11. <u>ಮೇಲ್ಮನವಿಯ ಸಂಕ್ಷಿಪ್ತ ಸಾರಾಂಶ:</u> ವಿಚಾರಣಾ ನ್ಯಾಯಾಲಯವು ದಾಖಲಾತಿಗಳನ್ನು, ಸಾಕ್ಷಿಗಳನ್ನು ಕೂಲಂಕುಷವಾಗಿ ಪರಿಗಣಿಸಿರುವುದಿಲ್ಲ. ಚಾಸಾ.4 ಚಿಕ್ಕಣ್ಣ ಚಾಲಕನಾಗಿಲ್ಲದೇ ಇದ್ದರೂ ಸಹಿತ ಪರಿಹಾರಕೋಸ್ಕರವಾಗಿ ಚಾಲಕ ಅಂತಾ ಸೇರ್ಪಡೆ ಮಾಡಿದ್ದು, ಒಂದು ದಿವಸ ತಡವಾಗಿ ದೂರು ಕೊಟ್ಟಿದ್ದರ ಬಗ್ಗೆ ಸಮಪರ್ಕವಾಗಿ ಉತ್ತರ ನೀಡಿರುವುದಿಲ್ಲ. ಅಮಾನತ್ತು ಮಹಜರ್ ಸಾಕ್ಷಿಗಳು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಟ್ರಾಕ್ಟರ್ ಚಾಲಕನಿಗೆ ಡಿಎಲ್ ಇಲ್ಲದೇ ಇದ್ದರೂ ಸಹಿತ ಬಸ್ ಚಾಲಕ ತಪ್ಪು ನಿಂದ ಅಪಘಾತ ಆಗಿಲ್ಲದೇ ಇದ್ದರೂ ಸಹಿತ ಪರಿಹಾರಕೋಸ್ಕರವಾಗಿ ಬಸ್ ಚಾಲಕನನ್ನು ಆರೋಪಿಯನ್ನಾಗಿ ಮಾಡಿದ್ದನ್ನು ವಿಚಾರಣಾ ನ್ಯಾಯಾಲಯವು ಕೂಲಂಕುಷವಾಗಿ ಸಾಕ್ಷಿ, ದಾಖಲೆ, ಕಾನೂನು ಅಂಶಗಳನ್ನು ಪರಿಗಣಿಸದೆ ಆರೋಪಿಗೆ ಶಿಕ್ಷೆ ವಿಧಿಸಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ. ಆದ್ದರಿಂದ ಮಾನ್ಯ ನ್ಯಾಯಾಲಯವು ವಿಚಾರಣಾ ನ್ಯಾಯಾಲಯವು ನೀಡಿದಂಥ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಸದರಿ ತೀರ್ಪನ್ನು ರದ್ದುಪಡಿಸಿ ಮೇಲ್ಮನವಿಯನ್ನು ಪುರಸ್ಕರಿಸಿ ಮೇಲ್ಮನವಿದಾರ/ಆರೋಪಿಯನ್ನು ನಿರ್ದೋಷಿ ಅಂತಾ ಪರಿಗಣಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

12. ಮೇಲ್ಮನವಿಯನ್ನು ಪರಿಶೀಲಿಸಿ, ನೋಂದಣಿ ಮಾಡಿಕೊಂಡು ನೋಟೀಸ್ ಕಳುಹಿಸಲಾಗಿ, ಎದುರುದಾರರ ಪರವಾಗಿ ಸರ್ಕಾರಿ ಅಭಿಯೋಜಕರು ಹಾಜರಾಗಿರುತ್ತಾರೆ.

13. ವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಾಕ್ಷಿ, ದಾಖಲೆಗಳನ್ನು ಪರಿಶೀಲಿಸಿ ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡಂತೆ ಅಂಶಗಳು ಚರ್ಚೆಗೆ ಬಂದಿರುತ್ತದೆಃ

1. ಮೇಲ್ಮನವಿದಾರರು, ವಿಚಾರಣಾ ನ್ಯಾಯಾಲಯವು ಸಿ.ಸಿ.ನಂ.71/2015 ದಿನಾಂಕ 02.01.2024 ರಂದು ಪ್ರಕರಣದಲ್ಲಿ ಮೇಲ್ಮನವಿದಾರ/ಆರೋಪಿಯನ್ನು ದೋಷಿ ಅಂತಾ ತೀರ್ಪು ನೀಡಿರುವ ಕಾರಣಗಳು ನ್ಯಾಯ ಸಮ್ಮತವಾಗಿರುವುದಿಲ್ಲ ಅಂತಾ ರುಜುವಾತುಪಡಿಸುವರೇ?
2. ಒಂದು ವೇಳೆ ನ್ಯಾಯಸಮ್ಮತವಾಗದೇ ಇದ್ದಲ್ಲಿ ಸದರಿ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಬೇಕಾಗುತ್ತದೆಯೇ?
3. ಯಾವ ಆದೇಶ?

14. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆಃ-

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಸಕಾರಾತ್ಮಕವಾಗಿ |
| ಅಂಶ ನಂ.3 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ |

## :: ಕಾರಣಗಳು ::

15. ಅಂಶ ಸಂಖ್ಯೆ **1** ಮತ್ತು **2:** ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಈ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

16. ನಿಶಾನೆ ಪಿ.1 - ದೂರಿನ ಬಗ್ಗೆ: ದೂರಿನಲ್ಲಿ ಚಿಕ್ಕಣ್ಣ ಟ್ರಾಕ್ಟರ್ ಮತ್ತು ಟ್ರೈಲರ್ ಚಾಲನೆ ಮಾಡುತ್ತಿದ್ದು, ಬಸ್ ನಂ.ಕೆಎ-11-ಎ-8999 ವೇಗವಾಗಿ ಬಂದು ಟ್ರಾಕ್ಟರನ ಟ್ರಾಲಿಯ ಹಿಂದೆ ಬಲಭಾಗಕ್ಕೆ ಡಿಕ್ಕಿ ಹೊಡೆಯಲಾಗಿದೆ ಅಂತಾ ದೂರಿನಲ್ಲಿ ನಮೂದಿಸಿದ್ದರೂ ಸಹಿತ ಟ್ರಾಕ್ಟರ್ ಟ್ರೈಲರ್ ನಂಬರನ್ನು ನಮೂದು ಮಾಡಿರುವುದಿಲ್ಲ. ಚಿಕ್ಕಣ್ಣ ಟ್ರಾಕ್ಟರ್‌ನಿಂದ ಎಸೆಯಲ್ಪಟ್ಟು, ರಸ್ತೆಯ ಡಿವೈಡರ್ ಮೇಲೆ ಬಿದ್ದಿದ್ದರಿಂದ ಆತನಿಗೆ ಏಟು ಆಗಿದೆ ಅಂತಾ ಹೇಳಿದ್ದು, ಆದರೆ ಚಿಕ್ಕಣ್ಣ ಈತನು ತನ್ನ ಸಾಕ್ಷಿಯಲ್ಲಿ ತನಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಅಂತಾ ಸಾಕ್ಷಿ ನುಡಿದಿರುತ್ತಾರೆ. ಒಂದು ವೇಳೆ, ಚಿಕ್ಕಣ್ಣ ಈತನು ಟಾಕ್ಟರನ ಚಾಲಕನಾಗಿದ್ದಲ್ಲಿ, ಟಾಕ್ಟರನಿಂದ ಬಿದ್ದಾಗ ಸಣ್ಣ-ಪುಟ್ಟ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಪ್ರಾಸಾ.1 - ಉಮೇಶ್ ಈತ ಚಾಲಕನಾಗಿದ್ದು, ಆತನಿಗೆ ಡಿ.ಎಲ್ ಇಲ್ಲದೇ ಇರುವುದರಿಂದ ಚಾಸಾ.4 – ಚಿಕ್ಕಣ್ಣ ಈತನನ್ನು ಒಂದು ದಿವಸ ತಡವಾಗಿ ಚಿಕ್ಕಣ್ಣ ಚಾಲಕ ಇರುತ್ತಾನೆ ಅಂತಾ ವಿಚಾರ ಮಾಡಿ ನಿಶಾನ ಪಿ.1 - ದೂರು ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

17. ಸಾಕ್ಷಿಗಳ ವಿಶ್ಲೇಷಣೆಯ ಬಗ್ಗೆ: ಪ್ರಾಸಾ.1/ಚಾಸಾ.1 - ಬಿ.ಜಿ. ಉಮೇಶ್, ಪ್ರತ್ಯಕ್ಷ ಸಾಕ್ಷಿಯಾಗಿದ್ದು ನಿಶಾನೆ ಪಿ.1 - ದೂರದಾರು ಆಗಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ.4 ಚಿಕ್ಕಣ್ಣ ಈತನು ಟ್ರಾಕ್ಟರ್ ಚಾಲಕನಾಗಿದ್ದ. ಆದರೆ, ಆತನಿಗೆ ಏನೂ ಗಾಯಗಳಾಗಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ. ಆದರೆ, ದೂರಿನಲ್ಲಿ ಟ್ರಾಕ್ಟರ್‌ನಿಂದ ಎಸೆಯಲ್ಪಟ್ಟು ರಸ್ತೆ ಡಿವೈಡರ್ ಮೇಲೆ ಬಿದ್ದಿರುತ್ತಾನೆ ಅಂತಾ ದೂರಿನಲ್ಲಿ ಹೇಳಿರುವುದರಿಂದ, ಒಂದು ವೇಳೆ ಚಾಸಾ.4 - ಚಿಕ್ಕಣ್ಣ ಚಾಲಕನಾಗಿದ್ದಲ್ಲಿ,

ಆತನಿಗೆ ಗಾಯಗಳು ಆಗುತ್ತಿದ್ದವು. ಗಾಯಗಳು ಆಗಿಲ್ಲದೇ ಇರುವುದರಿಂದ ಚಿಕ್ಕಣ್ಣ ಟ್ರಾಕ್ಟರ್ ಚಾಲಕನಾಗಿರುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಈ ಸಾಕ್ಷಿ ತನ್ನ ಪಾಟೀ ಸವಾಲು ಪುಟ 5 ರಲ್ಲಿ ಟ್ರಾಕ್ಟರ್‌ನ ಮಾಲೀಕ ನಾನೇ ಆಗಿರುತ್ತೇನೆ ಎನ್ನುವುದು ನಿಜ. ಟ್ರಾಕ್ಟರ್ ಚಲಾಯಿಸಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದರೆ ಸರಿ. ಹಾಗಾಗಿ ನೀವು ಅಪಘಾತ ಪರಿಹಾರ ನೀಡಬೇಕಾಗುತ್ತದೆ, ಕ್ರಿಮಿನಲ್ ಪ್ರಕರಣ ಎದುರಿಸಬೇಕಾಗುತ್ತದೆ ಎಂಬ ಉದ್ದೇಶದಿಂದ ಒಂದು ದಿವಸ ತಡವಾಗಿ ಚಿಕ್ಕಣ್ಣ ಟ್ರಾಕ್ಟರ್ ಚಲಾಯಿಸುತ್ತಿದ್ದ ಅಂತಾ ಕೇಳಿದ ಪ್ರಶ್ನೆಯನ್ನೂ ಅಲ್ಲಗಳೆದಿದ್ದು, ಇದಕ್ಕೆ ಪೂರಕವಾಗಿ ಪ್ರಾಸಾ.3 - ಗಂಗರಾಜು, ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇವರು ತಮ್ಮ ಪಾಟೀ ಸವಾಲಿನಲ್ಲಿ ಟ್ರಾಕ್ಟರನ್ನು ಉಮೇಶ ಇವರೇ ಚಲಾಯಿಸುತ್ತಿದ್ದು, ಬಸ್ ಓವರ್ ಟೇಕ್ ಮಾಡುವ ಬರದಲ್ಲಿ ಟ್ರಾಕ್ಟರ್ ಇಂಜಿನ್ ಬಸ್ಸಿಗೆ ತಗುಲಿರುತ್ತದೆ. ಹಾಗಾಗಿ, ಇಂಜಿನ್ ಬಲಭಾಗದಲ್ಲಿ ಕುಳಿತ್ತಂಥ ಮಂಜುನಾಥನಿಗೆ ಗಾಯಗಳು ಆಗಿರುತ್ತದೆ ಎಂದರೆ ಸರಿ. ಈ ಅಂಶ ಪರಿಶೀಲಿಸಲಾಗಿ, ಪ್ರಾಸಾ.1 ಈತನು ಟ್ರಾಕ್ಟರ್-ಟ್ರೈಲರ್‌ನ ಮಾಲೀಕನಾಗಿದ್ದು ಹಾಗೂ ಚಾಲಕನೂ ಸಹಿತ ಆಗಿದ್ದು, ಡಿ.ಎಲ್ ಇಲ್ಲದೇ ಇರುವುದರಿಂದ, ಚಾಸಾ.4 - ಚಿಕ್ಕಣ್ಣ ಈತನು ಟ್ರಾಕ್ಟರನ ಚಾಲಕನಾಗಿಲ್ಲದಿದ್ದರೂ ಸಹಿತ, ಒಂದು ದಿವಸ ತಡವಾಗಿ ಅಪಘಾತ ಟ್ರಾಕ್ಟರ್ ಚಾಲಕನ ತಪ್ಪಿನಿಂದಾಗಿದ್ದರೂ ಸಹಿತ ಪರಿಹಾರ ಪಡೆಯುವುದಕ್ಕೋಸ್ಕರವಾಗಿ ಬಸ್ಸಿನ ಚಾಲಕನನ್ನು ಈ ಕೇಸಿನಲ್ಲಿ ಆರೋಪಿಯನ್ನಾಗಿ ಮಾಡಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

18. ಸದರಿ ಸಾಕ್ಷಿ ತನ್ನ ಮುಂದುವರೆದ ಸಾಕ್ಷಿಯಲ್ಲಿ ನಿಶಾನೆ ಪಿ.1 - ದೂರಿನಲ್ಲಿ ನಾನು ಟ್ರೈಲರ್‌ನ ಹಿಂದುಗಡೆ ಕುಳಿತುಕೊಂಡು ಹೋಗುತ್ತಿದ್ದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ಅಂಶವನ್ನು ಪರಿಶೀಲಿಸಲಾಗಿ, ನಿಶಾನೆ ಪಿ.1 - ದೂರಿನಲ್ಲಿ ನಾನು, ಗಂಗರಾಜು, ಮಂಜುನಾಥ್ ಟ್ರ್ಯಾಕ್ಟರ್‌ನಲ್ಲಿ ಒಳಗೆ ಕುಳಿತ್ತಿದ್ದೆವು ಅಂತಾ ಉತ್ತರಿಸಿರುತ್ತಾರೆ ಮತ್ತು ಒಂದು ವೇಳೆ, ಅಪಘಾತ ಬಸ್ಸಿನ ಚಾಲಕನ ತಪ್ಪಿಂದಾಗಿದ್ದಲ್ಲಿ ಚಿಕ್ಕಣ್ಣ ಈತನು ಟ್ರ್ಯಾಕ್ಟರ್‌ನ ಚಾಲಕನಾಗಿದ್ದಲ್ಲಿ, ಆತನಿಗೆ ಯಾವುದೇ ಗಾಯಗಳು ಆಗಿಲ್ಲದೇ ಇದ್ದಾಗ ತಕ್ಷಣ ದೂರು ಕೊಡಬಹುದಾಗಿತ್ತು ಹಾಗೂ ಮಂಜುನಾಥ್ ಈತನೂ ಸಹಿತ ಚಿಕಿತ್ಸೆ ಪಡೆದುಕೊಂಡು ಮಧ್ಯಾಹ್ನ 3.00 ಗಂಟೆಗೆ ಬಿಡುಗಡೆಯಾಗಿದ್ದು, ತಕ್ಷಣ ದೂರು ಕೊಡಬಹುದಾಗಿತ್ತು. ಆದರೆ, ಉಮೇಶ್ ಈತನಿಗೆ ಡಿ.ಎಲ್ ಇಲ್ಲದೇ ಇರುವುದರಿಂದ ಆಸ್ಪತ್ರೆಯಿಂದ ಬಿಡುಗಡೆ ಆದ ತಕ್ಷಣ ದೂರು ಕೊಟ್ಟಿರುವುದಿಲ್ಲ. ನಂತರ ಚಾಸಾ.4 – ಚಿಕ್ಕಣ್ಣ ಇವರು ಚಾಲಕನಿರುತ್ತಾರೆ ಅಂತ ದೂರು ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಸದರಿ ಸಾಕ್ಷಿ ನಿಶಾನೆ ಪಿ.2 - ಮಹಜರ್ ಸಾಕ್ಷಿಯಾಗಿದ್ದು, ಸದರಿ ಮಹಜರನ್ನು ಘಟನೆಯಾದ 2 ದಿವಸದ ನಂತರ ಮಹಜರ್ ಮಾಡಿರುವುದರಿಂದ ಹಾಗೂ ಈ ಮಹಜರಿಗೆ ಅನುಗುಣವಾಗಿ ಕಚ್ಚಾ ನಕಾಶೆಯನ್ನು ತೆಗೆದಿಲ್ಲದೇ ಇರುವುದರಿಂದ ಅಪಘಾತ ಯಾರ ತಪ್ಪಿನಿಂದಾಗಿರುತ್ತದೆ ಎಂಬುದರ ಬಗ್ಗೆ ಅಭಿಯೋಜಕ ಪಕ್ಷವು ರುಜುವಾತುಪಡಿಸಲು ವಿಫಲವಾಗಿರುತ್ತದೆ. ಒಂದು ವೇಳೆ, ಆರೋಪಿಯ ತಪ್ಪಿನಿಂದ ಅಪಘಾತ ಆಗಿದ್ದಲ್ಲಿ, ಸ್ಥಳ ಮಹಜರ್ ಮಾಡಿದಾಗ ರಸ್ತೆಯ ವಸ್ತು ಸ್ಥಿತಿ, ವಾಹನಗಳ ವಸ್ತು ಸ್ಥಿತಿಯನ್ನು ನೋಡಿ ಒಂದು ನಕ್ಷೆ ತಯಾರು ಮಾಡಿದಲ್ಲಿ ಅಪಘಾತ ಯಾರ

ತಪ್ಪಿನಿಂದ ಆಗಿರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ನಕ್ಷೆಯನ್ನು ಹಾಜರುಪಡಿಸಿಲ್ಲದೇ ಇರುವುದರಿಂದ ಅಪಘಾತ ಆರೋಪಿಯ ತಪ್ಪಿನಿಂದಾಗಿರುತ್ತದೆ ಅಂತಾ ಮೇಲ್ನೋಟಕ್ಕೆ ರುಜುವಾತು ಆಗಿರುವುದಿಲ್ಲ.

19. ಪ್ರಾಸಾ.**2 – ನರಸಿಂಹರಾಜು** ಈತನು ಅಪಘಾತ ಆದ ವಿಷಯ ತಿಳಿದು ನಂತರ ಸ್ಥಳಕ್ಕೆ ಬಂದಿರುತ್ತಾರೆ. ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದಂತಹ ಸಾಕ್ಷಿ ಆಗಿರುವುದಿಲ್ಲ ಹಾಗೂ ಶವ ತನಿಖೆ ಮಹಜರ್ ಸಾಕ್ಷಿಯಾಗಿರುತ್ತಾರೆ. ಈ ಸಾಕ್ಷಿ ಈ ಕೇಸಿಗೆ ಮಹತ್ವವಾದಂಥ ಸಾಕ್ಷಿಯಾಗಿರುವುದಿಲ್ಲ.

20. ಪ್ರಾಸಾ.**3 – ಗಂಗರಾಜು**, ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇವರು ಮುಖ್ಯ ವಿಚಾರಣೆಯಲ್ಲಿ ಅಭಿಯೋಜಕ ಪೂರಕವಾಗಿ ಸಾಕ್ಷಿ ನುಡಿದಿದ್ದು, ಪಾಟೀ ಸವಾಲಿನಲ್ಲಿ ರಸ್ತೆ ದುರಸ್ತಿಯಲ್ಲಿ ನಡೆಯುತ್ತಿದುದ್ದರಿಂದ ಒಂದೇ ರಸ್ತೆಯಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತಿದ್ದವು ಎಂದರೆ ಸರಿ ಹಾಗೂ ಆ ದಿವಸ ಟ್ರಾಕ್ಟರ್‌ನಲ್ಲಿ ಚಾಸಾ.1, ಮಂಜುನಾಥ ಮತ್ತು ನಾನು ಮದ್ಯಪಾನ ಮಾಡಿದ್ದೆವು ಎಂದರೆ ಸರಿ. ಈ ಅಂಶ ಪರಿಶೀಲಿಸಲಾಗಿ, ರಸ್ತೆ ದುರಸ್ಥಿಯಲ್ಲಿರುವುದರಿಂದ ವಾಹನಗಳು ವೇಗವಾಗಿ ಹೋಗುವ ಸಾಧ್ಯತೆ ಇರುವುದಿಲ್ಲ ಮತ್ತು ಸದರಿಯವರು ಮದ್ಯಪಾನ ಮಾಡಿರುತ್ತಾರೆ ಅಂತಾ ಒಪ್ಪಿಕೊಂಡಿರುವುದರಿಂದ, ಸದರಿ ಟ್ರಾಕ್ಟರನ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹಿತ ಪರಿಹಾರಕ್ಕೋಸ್ಕರವಾಗಿ ಆರೋಪಿಯ ತಪ್ಪಿನಿಂದಾಗಿರುತ್ತದೆ ಎಂಬುದರ ಬಗ್ಗೆ

ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

21. ಪ್ರಾಸಾ.4 – ಚಿಕಣ್ಣ, ಈತನು ಮುಖ್ಯವಿಚಾರಣೆಯಲ್ಲಿ ಟ್ರಾಕ್ಟರ್ - ಟ್ರೈಲರ್ ಚಾಲಕನಾಗಿದ್ದೆನು ಅಂತ ಸಾಕ್ಷಿ ನುಡಿದಿದ್ದು, ಟ್ರಾಕ್ಟರ್ ನಂಬರ್ ಟ್ರೈಲರ್ ನಂಬರ್ ನನಗೆ ಗೊತ್ತಿಲ್ಲ. ಅಪಘಾತ ಆದಂಥ ಟ್ರ್ಯಾಕ್ಟರ್ ಟ್ರೈಲರ್ ಏನು ಮಾಡಿದ್ದಾರೆ ಅನ್ನುವುದು ಗೊತ್ತಿಲ್ಲ. ಸಂಜೆ ಕುದೂರು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಅಪಘಾತ ಆದ ಸಮಯದಲ್ಲಿ ನಿಮಗೆ ಗಾಯಗಳಾಗಿರುತ್ತವೆಯೇ ಅಂದರೆ ಗಾಯಗಳು ಆಗಿರುವುದಿಲ್ಲ. ವಾಹನದ ನಂಬರನ್ನು ಅಂಗೈಯಲ್ಲಿ ಬರೆದುಕೊಂಡು ಹೇಳುತ್ತಿದ್ದೇನೆ ಅಂದರೆ ಸರಿ ಅಂತಾ ಒಪ್ಪಿಕೊಂಡಿರುವುದರಿಂದ ಒಂದು ವೇಳೆ, ಈ ಸಾಕ್ಷಿ ಟ್ರಾಕ್ಟರ್ ಟ್ರೈಲರ್ ಚಾಲಕನಾಗಿದ್ದಲ್ಲಿ, ದೂರಿನಲ್ಲಿ ಹೇಳಿದ ಪ್ರಕಾರ ಟ್ರಾಕ್ಟರನಿಂದ ತೂರಿ ಹೋಗಿ ಬಿದ್ದಾಗ ಗಾಯಗಳು ಆಗುತ್ತಿದ್ದವು. ಗಾಯಗಳು ಆಗಿಲ್ಲದೇ ಇರುವುದರಿಂದ ಟ್ರಾಕ್ಟರ್ ಚಾಲಕನಾಗಿರುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

22. ಪ್ರಾಸಾ.**7 – ದೇವರಾಜು**, ನಿಶಾನೆ ಪಿ.2 - ಸ್ಥಳ ಮಹಜರ್ ಸಾಕ್ಷಿಯಾಗಿದ್ದು, ಪೊಲೀಸರು ನನಗೆ ನೋಟಿಸ್ ಕೊಟ್ಟಿಲ್ಲ. ಮಹಜರ್ ಬರೆಯಲು ನಾನು ಹೇಳಿರುವುದಿಲ್ಲ ಅಂತಾ ಸಾಕ್ಷಿ ನುಡಿದಿರುತ್ತಾರೆ. ಅದೇ ಪ್ರಕಾರ ಪ್ರಾಸಾ.**9 - ರುದ್ರೇಶ್**, ನಿಶಾನೆ ಪಿ.4 ರ ಅಮಾನತ್ತು ಮಹಜರ್ ಸಾಕ್ಷಿಯಾಗಿದ್ದು, ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಗಳ ಮುಖಾಂತರ ಸ್ಥಳ ಮತ್ತು ಅಮಾನತ್ತು ಮಹಜರ್ ರುಜುವಾತು ಆಗಿರುವುದಿಲ್ಲ.

23. <u>ತನಿಖಾಧಿಕಾರಿಯ ಸಾಕ್ಷಿಯ ಬಗ್ಗೆ:</u> ಪ್ರಾಸಾ.5 - ಟಿ.ಎಂ.ಗಂಗಾಧರ್ ಇವರು ಭಾಗಶಃ ತನಿಖೆ ಮಾಡಿದ್ದು, ಪ್ರಾಸಾ.6 – ಕೆ.ಪಿ.ರಾಜಶೇಖರಯ್ಯ ಇವರು ಸಂಪೂರ್ಣ ತನಿಖೆ ಮಾಡಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಈ ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ <u>ಚಿಕ್ಕಣ್ಣ ಈತನು ವಾಹನ ಚಾಲನೆ ಮಾಡಿದ್ದರ ಬಗ್ಗೆ ಆತನ ಚಾಲನಾ ಪರವಾನಿಗೆ ಪಡೆದುಕೊಂಡಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ</u>. ಅಪಘಾತವದ ಸ್ಥಳದಿಂದ ಎರಡೂ ವಾಹನಗಳನ್ನು ಯಾವ ಸಮಯದಿಂದ ತೆರವುಗೊಳಿಸಲಾಗಿರುತ್ತದೆ ಎಂಬುದರ ಬಗ್ಗೆ ಮಹಜರಿನಲ್ಲಿ ನಮೂದು ಮಾಡಿಲ್ಲ ಹಾಗೂ ಪೊಲೀಸ್ ಠಾಣೆಗೆ ಯಾರು ತೆಗೆದುಕೊಂಡು ಬಂದಿರುತ್ತಾರೆ ಅಂತಾ ಅವರನ್ನು ವಿಚಾರಣೆ ಮಾಡಿರುವುದಿಲ್ಲ. ವಾಹನಗಳು ಅಪಘಾತವಾದ ಸ್ಥಳದಲ್ಲಿ ತಕ್ಷಣ ಮಹಜರ್ ಮಾಡಿಲ್ಲ ಮತ್ತು ನಕ್ಷೆಯನ್ನು ತಯಾರು ಮಾಡಿರುವುದಿಲ್ಲ. ಔಟ್‌ಪೋಸ್ಟ್‌ನಲ್ಲಿ ಟ್ರಾಕ್ಟರ್ ಮತ್ತು ಟ್ರೈಲರ್ ಜೋಡಣೆಯಾಗಿ ನಿಂತಿರುತ್ತದೆ. <u>ಟ್ರೈಲರ್ ಸಂಖ್ಯೆಯನ್ನು ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ.</u> <u>ಟ್ರೈಲರ್ ನೋಂದಣಿ ಸಂಖ್ಯೆಗೆ ಸಂಬಂಧಪಟ್ಟಂಥ ದಾಖಲಾತಿಗಳನ್ನೂ ಸಹಿತ ನಾನು ಪಡೆದುಕೊಂಡಿಲ್ಲ ಮತ್ತು ಮಹಜರಿನಲ್ಲಿಯೂ ಸಹಿತ ನಮೂದಿಸಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ.</u> ಸದರಿ ತನಿಖಾಧಿಕಾರಿಯವರು ಮಾಡಿದಂಥ ತನಿಖೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ, ಪ್ರಾಸಾ.1 ಇವರು ಟ್ರಾಕ್ಟರ್ ಟ್ರೈಲರನ ಚಾಲಕನಾಗಿದ್ದು, ಆತನ ಡಿ.ಎಲ್ ಇಲ್ಲದೇ ಇರುವುದರಿಂದ ಪ್ರಾಸಾ.4 - ಚಿಕ್ಕಣ್ಣ ಈತನನ್ನು ಚಾಲಕನಾಗಿರುತ್ತಾನೆ ಅಂತಾ ಸೇರ್ಪಡೆ ಮಾಡಿ ಮೃತರಿಗೆ ಪರಿಹಾರ ಕೊಡಿಸುವ ಸಲುವಾಗಿ ಆರೋಪಿಯ ವಿರುದ್ಧ

ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

24. ನಿಶಾನೆ ಪಿ.**7** - ಮೋಟಾರ್ ವಾಹನ ತನಿಖಾಧಿಕಾರಿ ಕೊಟ್ಟಂಥ ವರದಿಯನ್ನು ಪರಿಶೀಲಿಸಲಾಗಿ, ಟ್ರಾಕ್ಟರ್ - ಟ್ರೈಲರ್‌ಗೆ ಯಾವುದೇ ರೀತಿ ಡ್ಯಾಮೇಜ್ ಆಗಿರುವುದಿಲ್ಲ ಅಂತಾ ನಮೂದಿಸಿರುತ್ತಾರೆ. ಒಂದು ವೇಳೆ, ಬಸ್ಸು ಹಿಂದಿನಿಂದ ಬಂದು ಟ್ರಾಕ್ಟರ್ ಟ್ರೈಲರ್‌ನ ಹಿಂಭಾಗಕ್ಕೆ ಗುದ್ದಿದ್ದಲ್ಲಿ ಸದರಿ ಟ್ರಾಕ್ಟರ್‌ನ ಭಾಗ ಜಖಂ ಆಗುತ್ತಿತ್ತು. ಜಖಂ ಆಗದೇ ಇರುವುದರಿಂದ ಸದರಿ ಚಾಲಕ ಹಿಂದುಗಡೆ ಬರತಕ್ಕಂಥ ಬಸ್ಸನ್ನು ಗಮನಿಸದೇ ರಸ್ತೆಯ ಬಲಭಾಗಕ್ಕೆ ತೆಗೆದುಕೊಂಡಾಗ ಸದರಿ ಅಪಘಾತ ಆಗಿರುತ್ತದೆ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುವುದಿಲ್ಲ.

25. ಪ್ರಾಸಾ.1 ಇವರು ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುವುದಿಲ್ಲ. ಟ್ರಾಕ್ಟರ್ - ಟ್ರೈಲರ್ ನಂಬರ್ ಗೊತ್ತಿಲ್ಲ. ಅದೇ ದಿವಸ ಪೊಲೀಸರು ಕುದೂರು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಅಂತಾ ಹೇಳಿದ್ದು ಹಾಗೂ ನಮ್ಮ ಟ್ರಾಕ್ಟರ್ ಇಂಜಿನ್‌ನ ಬಲಭಾಗದ ಮುಂದುಗಡೆ ಡ್ಯಾಮೇಜ್ ಆಗಿರುತ್ತದೆ ಅಂದರೆ ನಿಜ. ಅಂಬ್ಯುಲೆನ್ಸ್ ವಾಹನದಲ್ಲಿ ನಾನು, ಗಂಗರಾಜು, ಮಂಜುನಾಥ ಹೋಗಿರುತ್ತೇವೆ. ಅಪಘಾತವಾದ ಮಾರನೇ ದಿವಸ 3.00 ಗಂಟೆಗೆ ಡಿಸ್ಚಾರ್ಜ್ ಆಗಿರುತ್ತೇನೆ. ಅದೇ ದಿವಸ ದೂರು ಕೊಡಲು ಆಗಿರುವುದಿಲ್ಲ. ಏಕೆ ದೂರು ಕೊಡಲು

ಆಗಿರುವುದಿಲ್ಲ ಎಂಬುದರ ಬಗ್ಗೆ ಸಮಂಜಸವಾದ ಕಾರಣಗಳನ್ನು ನೀಡಿರುವುದಿಲ್ಲ. ಈ ಮೇಲ್ಕಂಡಂಥ ಎಲ್ಲಾ ಸಾಕ್ಷಿ, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಒಂದು ವೇಳೆ, ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದಲ್ಲಿ, ಚಾಸಾ.4 – ಚಿಕ್ಕಣ್ಣ ಈತನಿಗೆ ಯಾವುದೇ ಗಾಯಗಳು ಆಗಿಲ್ಲದೇ ಇದ್ದಾಗ, ತಕ್ಷಣ ಪೊಲೀಸ್ ಠಾಣೆಗೆ ದೂರು ಕೊಡಬಹುದಾಗಿತ್ತು ಅಥವಾ ಪ್ರಾಸಾ.1 ಇವರು ಗಾಯಾಳುವಾಗಿದ್ದು, ಟ್ರಾಕ್ಟರ್ ಮತ್ತು ಟ್ರೈಲರ್‌ನ ಚಾಲಕ, ಮಾಲೀಕನಾಗಿದ್ದು, ಡಿ.ಎಲ್ ಇರುವುದಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಮಧ್ಯಾಹ್ನ 3.00 ಗಂಟೆಗೆ ಡಿಸ್ಚಾರ್ಜ್ ಆಗಿದ್ದು, ತಕ್ಷಣ ದೂರು ಕೊಡಬಹುದಾಗಿತ್ತು. ಸದರಿ ಟ್ರಾಕ್ಟರ್ ಚಾಲಕ ಚಿಕ್ಕಣ್ಣ ಆಗಿರುವುದಿಲ್ಲ ಅನ್ನುವ ವಿಚಾರ ಪ್ರಾಸಾ.1 ರವರಿಗೆ ಗೊತ್ತಿದ್ದು, ಪ್ರಾಸಾ.1 ಟ್ರಾಕ್ಟರ್‌ನ ಚಾಲಕನಿರುತ್ತಾನೆ ಅಂತಾ ಗೊತ್ತಿದ್ದು, ಡಿ.ಎಲ್ ಇರುವುದಿಲ್ಲ ಅನ್ನುವ ವಿಚಾರವೂ ಸಹಿತ ತನಿಖಾಧಿಕಾರಿಗೆ ಗೊತ್ತಿದ್ದು, ಒಂದು ದಿವಸ ತಡವಾಗಿ ಆರೋಪಿಯ ವಿರುದ್ಧ ಈ ಕೇಸನ್ನು ದಾಖಲು ಮಾಡಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಆದ್ದರಿಂದ ವಿಚಾರಣಾ ನ್ಯಾಯಾಲಯವು ಸಾಕ್ಷಿ, ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸದೇ ಆರೋಪಿಗೆ ಶಿಕ್ಷೆ ವಿಧಿಸಿದ್ದು ನ್ಯಾಯಸಮ್ಮತವಾಗಿರುವುದಿಲ್ಲ. ಆದ್ದರಿಂದ ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಅಂಶ ಸಂಖ್ಯೆ ***1*** ಮತ್ತು ***2*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

26. <u>ಅಂಶ ಸಂಖ್ಯೆ **3:**</u> ಅಂಶ 1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ಮೇಲ್ಮನವಿದಾರ/ಆರೋಪಿಯ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ.374(3)(ಎ)ರ ಅಡಿಯಲ್ಲಿ ಸಲ್ಲಿಸಿದಂತಹ ಮೇಲ್ಮನವಿಯನ್ನು ಪುರಸ್ಕರಿಸಲಾಯಿತು.

ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಮಾಗಡಿ ಇವರು ಸಿ.ಸಿ.ನಂ.71/2015 ದಿನಾಂಕ 02.01.2024 ರಂದು ನೀಡಿದಂತಹ ತೀರ್ಪನ್ನು ರದ್ದುಪಡಿಸಲಾಯಿತು.

ಮೇಲ್ಮನವಿದಾರ/ಆರೋಪಿಯ ಮೇಲೆ ಇರತಕ್ಕಂತಹ ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು 304(ಎ)ರ ಅಡಿಯಲ್ಲಿ ಅಪರಾಧದಿಂದ ದೋಷಮುಕ್ತಗೊಳಿಸಲಾಯಿತು.

ಆರೋಪಿ ವಿಚಾರಣಾ ನ್ಯಾಯಾಲಯದಲ್ಲಿ ದಂಡದ ಹಣವನ್ನು ತುಂಬಿದಲ್ಲಿ ಮೇಲ್ಮನವಿ ಅವಧಿ ಮುಗಿದ ನಂತರ ವಿಚಾರಣಾ ನ್ಯಾಯಾಲಯವು ಆರೋಪಿಗೆ ಸದರಿ ಹಣವನ್ನು ವಾಪಸ್ ಕೊಡಲು ಆದೇಶಿಸಲಾಯಿತು.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ವಿಚಾರಣಾ ನ್ಯಾಯಾಲಯದಿಂದ ಬಂದಂತಹ ಮೂಲ ಕಡತವನ್ನು ಈ ತೀರ್ಪಿನ ಪ್ರತಿಯೊಂದಿಗೆ ತಕ್ಷಣವೇ ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡಲು ಆದೇಶಿಸಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ - III ರವರಿಗೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **22** ನೇ ಜುಲೈ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.